**<u>ಅಸಲು ದಾವಾ ಸಂಖ್ಯೆ -181/2023</u>** **ಡಿ.ಡಬ್ಲ್ಯೂ:-1**

ದಿನಾಂಕಃ 20.09.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ನಮ್ಮ ತಂದೆ ಪರಮೇಶಪ್ಪರವರಿಗೆ 5 ಜನ ಮಕ್ಕಳು ಅಂದರೆ ರುದ್ರೇಶಪ್ಪ, ಪಂಚಾಕ್ಷರಪ್ಪ, ನಾನು, ವೀರಭದ್ರಪ್ಪ ಮತ್ತು ಶಿವಮೂರ್ತ್ಯಪ್ಪ. 1 ನೇ ಪ್ರತಿವಾದಿ ನನಗೆ ಮಾವರಾಗಬೇಕು. ಸರ್ವೇ ನಂ.1 ರ ಆಸ್ತಿಯು ಸರ್ವೇ ನಂ.1/1 ರಿಂದ 1/7 ರಂತೆ ಪೋಡಿಯಾಗಿರುತ್ತದೆ. ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಪ್ರತಿವಾದ ಪತ್ರಕ್ಕೆ ಮಾಹಿತಿಯನ್ನು ನಾವೇ ಕೊಟ್ಟಿರುತ್ತೇವೆ. ಪ್ರತಿವಾದ ಪತ್ರಕ್ಕೆ ಮಾಹಿತಿಯನ್ನು ಕೊಡಲು 1, 3 ರಿಂದ 7 ನೇ ಪ್ರತಿವಾದಿಗಳ ಹೋಗಿದ್ದೆವು. ವಾದಿಯು ಈ ದಾವೆಯನ್ನು ಸರ್ವೇ ನಂ.1 ರ ಆಸ್ತಿಯಲ್ಲಿ ಒತ್ತುವರಿ ಆಗಿದೆ ಎಂದು ದಾವೆಯನ್ನು ಸಲ್ಲಿಸಿದ್ದಾರೆ. ಈ ದಾವೆಯಲ್ಲಿ ವಾದಿಯು ಯಾವ ಯಾವ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಆಸ್ತಿ ಸರ್ವೇ ನಂ.1/7 ರಲ್ಲಿ 6 ಗುಂಟೆ ಜಮೀನು ಮತ್ತು 1/10 ರಲ್ಲಿ 17 ಗುಂಟೆ ಜಮೀನು ಇರುತ್ತದೆ. ಸರ್ವೇ ನಂ.1 ರಲ್ಲಿ ಒಟ್ಟು 9 ಎಕರೆ ಜಮೀನು ಇರುತ್ತದೆ. ಸರ್ವೇ ನಂ.1 ರಲ್ಲಿ ವಾದಿಗೆ 4 ಎಕರೆ 36 ಗುಂಟೆ ಜಮೀನು. ಸರ್ವೇ ನಂ.1 ರಲ್ಲಿ ನಮ್ಮ ತಂದೆಗೆ 1 ಎಕರೆ 36 ಗುಂಟೆ ಜಮೀನು ಇರುತ್ತದೆ. 1 ನೇ ಪ್ರತಿವಾದಿಗೆ 3 ಎಕರೆ 1 ಗುಂಟೆ ಜಮೀನು ಇರುತ್ತದೆ. ಮೇಲೆ ಹೇಳಿದಂತೆ 4 ಎಕರೆ 36 ಗುಂಟೆ ಜಮೀನು, 1 ಎಕರೆ 36 ಗುಂಟೆ ಜಮೀನು ಮತ್ತು 3 ಎಕರೆ 1 ಗುಂಟೆ ಜಮೀನು ಸರ್ವೇ ನಂ.1/2 ರಲ್ಲಿ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪೋಡಾದ ನಂತರ ಸರ್ವೇ ನಂ.1/4 ಆಗಿದೆ ಎಂದು ನುಡಿಯುತ್ತಾರೆ. ಸರ್ವೇ ನಂ.1 ರ ಆಸ್ತಿಯು 2019 ರಲ್ಲಿ ಪೋಡಾಗಿರುತ್ತದೆ. ಸರ್ವೇ ನಂ.1 ಆಸ್ತಿಯು ಪೋಡಿಯಾದ

ಸಮಯದಲ್ಲಿ ವಾದಿಗೆ, ನಮ್ಮ ತಾಯಿ ರುದ್ರಮ್ಮ ಮತ್ತು 1 ನೇ ಪ್ರತಿವಾದಿಗೆ ಯಾವ ಆಸ್ತಿಯ ನಂಬರ್ ನ ಆಸ್ತಿ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ವಾದಿಗೆ ಸರ್ವೇ ನಂ.1/3, ನನ್ನ ತಾಯಿಗೆ ಸರ್ವೇ ನಂ.1/2 ಮತ್ತು 1 ನೇ ಪ್ರತಿವಾದಿಗೆ ಸರ್ವೇ ನಂ.1/4 ರ ಆಸ್ತಿ ಬಂದಿರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.